ಮಹಂತದೇವರ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1—2—3ನೇ ಅರ್ಜೀದಾರ್ರು ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 30ರಲ್ಲು ಕೇಳಿಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಹಂತ ದೇಹವಡೇರ ಆಸ್ತಿಗೆಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

ಸ್ ಱ 1887ನೇ ಇಸವಿ ಡಿಸಂಬರ್ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಶೀ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

ಯಸ್. ಹೇಮಾಜೀರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯೂದ ಡಿಕ್ರೀ ದೇಣೇದಾರ ಯಳಂದೂರು ಕಸಬೇಯಲ್ಲಿರುವ ಶಿವಾಚಾರದ ವೀರಕೆಟ್ಟೀವುಗ ಆವಂಣಕಟ್ಟೀ ಯಂಬವನ ವಿಷಯದಲ್ಲಿ—

ಸ್ ಱ 1887ನೇ ಇಸವಿ ದಿವಾಳೀ ಕೇಸ್ ನಂಬರ್ 321.

ಹುಕ್ಕುಂ.

ಮೇಲ್ಕಂಡ ಆವಂಣಕೆಟ್ಟೀ ಯಂಬವನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೊಬರೂ ಅರ್ಜೀದಾರನಾದ ಆವಂಣಕೆಟ್ಟೀ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ನಾರಾಯಣಾಯರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಯಜಮಾನ ಪುಟ್ಟಣ್ಣನ ತರಫಿ ಅಡ್ವೊಕೇಟ್ ಮೆ|| ಕಂಠೀರವಾಚಾರ್, 2ನೇ ನಾರಾಯಣಕೆಟ್ಟೀ ಖುದ್ದು ಹಾಜರು ಇವರಿಗೂ ದರ್ಖಾಸ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಖಾಸ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂಬರೆ,—3ನೇ ಗುರುಬಸವಕೆಟ್ಟಿ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ವೀರಕೆಟ್ಟೀ ಮಗ ಆವಂಣಕೆಟ್ಟೀ ಯಂಬವನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೊಕ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ ಱ 1887ನೇ ಇಸವಿ ನವಂಬರ್ 30ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್‌ನಿಶೀ ನಮ್ಮ ದಸ್ತಖತ್ತೊಡನೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸಾಲಬಾಬತು.	ಇಂಥಾ ಲೇಣೇದಾರು ಯಾವಾಗ ಲೇಣೇ ಮಾಡಿದರು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ತಿರುಮಕೂಡ್ಲು ನರಸೀಪುರದ ತಾಲ್ಲೂಕು ನರಸೀಪುರದಲ್ಲಿರುವ ಯಜಮಾನ ಪುಟ್ಟಣ್ಣ ..	72—1—6	..	ಡಿಕ್ರೀ ಬಾಬತು.	

ದಿವಾಳೀಯಾದ ಡಿಕ್ರೀದೇಣೇದಾರ ಮೈಸೂರಿನಲ್ಲಿರುವ ಅನಂತರಾಮಯ್ಯನ ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ನಂಬರು 271.

ಹುಕ್ಕುಂ.

ಮೇಲ್ಕಂಡ ಅನಂತರಾಮಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ ಅನಂತರಾಮಯ್ಯನ ಪರವಾಗಿ ಅಡ್ವೊಕೇಟ್ ಮೆ|| ನರಸುಹ್ಮಾಚಾರ್ಯರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಅಳಶಿಂಗ್ರಾಚಾರಿ 9ನೇ ತಿಮ್ಮಯ್ಯ, 4ನೇ ಸಿದ್ದರಾಮಯ್ಯ ಇವರು ಖುದ್ದು ಹಾಜರು; 3ನೇ ಸುಬ್ಬರಾವ್ 5ನೇ ಸುಬ್ಬಾಜೋಯಿಸ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—2ನೇ ಶ್ರೀನಿವಾಸಯ್ಯಂಗಾರ್ರು 6ನೇ ಸೈದ್ ಮಹಮ್ಮದ್ 7ನೇ ವೆಂಕಟಸುಬ್ಬಶೆಟ್ಟಿ 8ನೇ ನಂಜುಂಡಶೆಟ್ಟಿ 10ನೇ ರಂಗರಾಮ ನರಸುಹ್ಮಾಚಾರಿ 11ನೇ ಬಚ್ಚಣ್ಣ.

ಸಿವಿಲ್ ಪ್ರೊಸಿಜೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಅನಂತರಾಮಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನನ್ನ ನಿರ್ಬಂಧದಿಂದ ವಿವೋಜನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥಿರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1887ನೇ ಇಸವಿ ನವೆಂಬರ್ 30ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಸೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಲಿಗೆ.	ಯಾವಾಗ ಪೇಣೇ ಉಪಪನ್ನ.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇ ನಾದರೂ ಇದ್ದರೆ.	ಷರಾ.
1	ಮೈಸೂರು ಸಂಪತ್ತು ಮೂರ ಬ್ಯಾಂಕ್ ವಿಜಂಟೆ ಅಳಶಿಂಗ್ರಾಚಾರ್ರು ..	232—11—0	..	ಡಿಕ್ರೀ ಬಾಬತು.	

ದಿವಾಳೀಯಾದ ಡಿಕ್ರೀ ಡೇಣೇದಾರ ಶ್ರೀರಂಗಪಟ್ಟಣದ ತಾಲ್ಲೂಕು ರಾಂಪುರದಲ್ಲಿರುವ ತಿಪ್ಪೇಗೌಡನ ಹೆಂಡತೀ ಭೋರಮ್ಮನ

ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ನಂಬರ್ 334.

ಹುಕ್ಕುಂ.

ಮೇಲ್ಕಂಡ ಭೋರಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರಳಾದ ಭೋರಮ್ಮನ ಪರವಾಗಿ ಅಡ್ವೊಕೇಟ್ ಮೆ|| ನರಸುಹ್ಮಯ್ಯಂಗಾರ್ರನ್ನೂ ಮತ್ತು ಸದರೀಯವಳ ಲೇಣೇದಾರ್ರಾದ 1ನೇ ಗಂಗಾಧರಜೋಯಿಸ 2ನೇ ಬಿಳಿಗಿರಿಜೋಯಿಸ ಇವರ ತರಫ್ ಅಡ್ವೊಕೇಟ್ ನರಸುಹ್ಮಾಚಾರ್ರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—3ನೇ ವೆಂಕಟರಮಣಜೋಯಿಸ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಭೋರಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳೀಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೆಯಾದವಳನ್ನ ನಿರ್ಬಂಧದಿಂದ ವಿವೋಜನೇ

ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ 1887ನೇ ಇಸವಿ ಡಿಸಂಬರ್ 7ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಸೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಹೊಣಲಗೆ.	ಹೊಣೆಗಾರಿಕೆ ಯಾವಾಗ ಹುಟ್ಟಿದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಟಿಪ್ಪಣಿ.
1	ಮೈಸೂರಿನಲ್ಲಿರುವ 1ನೇ ಗಂಗಾಧರಜೋಯಿಸ 2ನೇ ಬಿಳಗಿರಿಜೋಯಿಸ, 3ನೇ ವೆಂಕಟರಮಣ ಜೋಯಿಸ	76—0—6	..	ಡಿಕರೀ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ನೋಟೀಸ್.

ತಾರೀಖು 9ನೇ ಡಿಸಂಬರ್ 1887.

ಆಲದೂರು ವಿವಾಹಮಂಗಲ ಪ್ರದ ಪರಸ್ಪರಸಹಾಯನಿಧಿ ಲಿಮಿಟೆಡ್ ಆಫೀಸಿನಿಂದ,—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂಪರೆ, ಈ ಕಂಪನೀಯನ್ನ ಸ್ 1887ನೇ ಇಸವಿ ಡಿಸಂಬರ್ ತಾರೀಖು 30ನೇ ದಿನುಲ್ಲಿ ಮುಚ್ಚಿ ಬಿಡಲ್ಪಡುತ್ತೆ. ಈ ಕಂಪನೀ ಮೇಲೆ ಲೇಣೇ ದೇಣೇ ವಗೈರೇ ವ್ಯವಹರಣೇ ಇರತಕ್ಕವರು ಆ ತಾರೀಖಿನ ವಳಗಾಗಿ ಕೋರ್ಟು ಮೂಲಕವೇ ಆಗಲಿ ಕಂಪನೀ ರೂಬರೂಪೇ ಆಗಲಿ ವ್ಯವಹರಿಸಿಕೊಳ್ಳಬೇಕು. ನಂತರ ವ್ಯವಹರಣೇ ಬಂದರೆ ಕಂಪನೀಯವರು ಜವಾಬ್ದಾರರಾಗುವದಿಲ್ಲ.

ನಾ|| ಸುಬ್ಬರಾವ್ ಮ್ಯಾನೇಜರ್. ನಂಜಪ್ಪಗೌಡ ಪ್ರಸಿಡೆಂಟ್.

ಗೈರ್‌ವಿಲಾ ಆದ ಕರೆನ್ಸೀನೋಟಿನ ಬಲಭಾಗದ.

ನಂಬರ್.	ಸರ್ಕಲ್.	ಕ್ರಯ.	ಹಕ್ಕುದಾರ್—ಬೆಂಗಳೂರು ಚಿಕ್ಕಪೇಟೆಯಲ್ಲಿ
B. 96—33248	ಮದರಾಸ್.	ರೂ. 10	45ನೇ ನಂಬರ್ ಸ್ಟ್ಯಾರ್ಡ್ಸ್ ಹೋಂನಲ್ಲಿರುವ ಯಂ.
	ಡಿಟೋ ಯಡಭಾಗ.		ಕೇಶವಯ್ಯ.
B. 87—17124	ಮದರಾಸ್.	ರೂ. 5	

Mysore Govt. Press, Bangalore.—1887.